ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ದೇವನಹಳ್ಳಿ

ಸಿಸಿ ನಂಬರು ಃ 4386/ 2018

ಫಿರ್ಯಾದಿ ಃ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸಂಚಾರ ಪೊಲೀಸ ಠಾಣೆ

ವಿರುದ್ಧ

ಆರೋಪಿತರು ಃ ಎ.ಬಿ.ದೇವೇಂದ್ರ

ಆಪಾದನೆ

ಶ್ರೀ. ಸಂದೇಶ.ಕೆ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ದೇವನಹಳ್ಳಿ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆರೋಪವನ್ನು ಹೊರಿಸುತ್ತಿದ್ದೇನೆಂದರೆ

ದಿನಾಂಕ 26-01-2017 ರಂದು ಸಂಜೆ ಸುಮಾರು 07.35 ಗಂಟೆ ಸಮಯದಲ್ಲಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸಂಚಾರ ಪೊಲೀಸ್ ಠಾಣಾ ಸರಹದ್ದು, ನೀವು ಕೆ.ಎಸ್.ಆರ್.ಟಿ.ಸಿ ಬಸ್ ನಂ. ಕೆಎ-19-ಎಫ್-3344 ರ ಚಾಲಕನಾಗಿದ್ದು ಸದರಿ ವಾಹನವನ್ನು ಬೆಂಗಳೂರು-ಬಳ್ಳಾರಿ ರಸ್ತೆಯಲ್ಲಿ ಬೆಂಗಳೂರು ಕಡೆಯಿಂದ ದೇವನಹಳ್ಳಿ ಕಡೆಗೆ ಅತಿವೇಗ ಮತ್ತು ಅಜಾಗರೂತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿ ಚಲಿಸಿಕೊಂಡು ಬಂದು ಭಾರತೀಯ ದಂತೆ ಸಂಹಿತೆ ಕಲಂ 279 ರ ರೀತ್ಯಾ ಶಿಕ್ಷಾರ್ಹ ಅಪರಾಧ ಮಾಡಿದ್ದು ನನ್ನ ಸಂಜ್ಞೆಯಲ್ಲಿದೆ .

ಎರಡನೆಯದಾಗಿ, ಮೇಲ್ಕಂಡ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ನೀವು ಹಿರಾನಂದನಿ ಅಪಾರ್ಟ್‌ಮೆಂಟ್ ಹತ್ತಿರ ಪೂರ್ವದಿಂದ ಪಶ್ಚಿಮದ ಕಡೆಗೆ ರಸ್ತೆ ದಾಟುತ್ತಿದ್ದ ಪಾದಚಾರಿ ಮಂಜುನಾಥ ರವರಿಗೆ ಡಿಕ್ಕಿ ಮಾಡಿದ ಪರಿಣಾಮ ಪಾದಚಾರಿ ರಸ್ತೆಯ ಮೇಲೆ ಬಿದಿದ್ದು, ವಾಹನದ ಚಕ್ರ ತಲೆಯ ಮೇಲೆ ಹರಿದು ತೀವ್ರವಾಗಿ ಗಾಯಗೊಂಡು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಇದಕ್ಕೆ ಕಾರಣ ನೀವು ಎಂದು ಭಾರತೀಯ ದಂಡ ಸಂಹಿತೆ ಕಲಂಃ 304(ಎ) ರ ರೀತ್ಯಾ ಶಿಕ್ಷಾರ್ಹ ಅಪರಾಧ ಮಾಡಿದ್ದು ನನ್ನ ಸಂಜ್ಞೆಯಲ್ಲಿದೆ.

ಕೊನೆಯದಾಗಿ, ಮೇಲ್ಕಂಡ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ನೀವು ಪಾದಚಾರಿ ಮಂಜುನಾಥ ರವರಿಗೆ ಡಿಕ್ಕಿ ಮಾಡಿ ವಾಹನ ಸಮೇತ ಅಪಘಾತ ನಡೆದ ಸ್ಥಳದಿಂದ ಪರಾರಿಯಾಗಿರುತ್ತೀರಿ ಎಂದು ಭಾರತೀಯ ದಂಡ ಸಂಹಿತೆ ಕಲಂಃ 134(ಎ ಮತ್ತು ಬಿ) ರೆ.ವಿ. 187 ಎಂ.ವಿ. ಆಕ್ಟ್ ರ ರೀತ್ಯಾ ಅಪರಾಧವೆಸಗಿದ್ದೀರಿ ಎಂದು ನನ್ನ ಸಂಜ್ಞೆಯಲ್ಲಿದೆ.

ಆದುದರಿಂದ ಆರೋಪಿಯಾದ ನಿಮ್ಮಗಳ ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕೆಂದು ನಿರ್ದೇಶಿಸಿದ್ದೇನೆ .

**ಪ್ರಶ್ನೆ-**1 **ಃ ಈಗ ನಿಮಗೆ ಓದಿ ಹೇಳಿ ವಿವರಿಸಿದತಹ ಆಪಾದಣೆ ನಿಮಗೆ ಅರ್ಥವಾಗಿದೆಯೇ?**
**ಉತ್ತರ ಃ**

**ಪ್ರಶ್ನೆ-**2 **ಃ ನೀವು ಆಪಾದಣೆಯನ್ನು ಒಪ್ಪಿಕೊಳ್ಳುತ್ತಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತಿರಾ?**
**ಉತ್ತರ ಃ**

**ಈ ಮೇಲೆ ಹೇಳಿದ ಆಪಾದಣೆಯನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಅವರಿಗೆ ಅರ್ಥವಾಗುವಂತೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬಹಿರಂಗ ನ್ಯಾಯಾಲಯದಲ್ಲಿ ದಾಖಲು ಮಾಡಿಕೊಂಡಿರುತ್ತೇನೆ.**

**ದಿನಾಂಕ** 05**ನೇ ಅಕ್ಟೋಬರ್ ಮಾಹೇ** 2019

**ಪ್ರಧಾನ ಸಿವಿಲ್‌ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**
**ದೇವನಹಳ್ಳಿ**